ಮೇಲೆ ಛಾವಣಿ ಮೇಲೆ ಪ್ರಯಾಣಿಕರನ್ನು ಕೊಂಡು ಹೋಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ. ಖಾಸಗಿ ಬಸ್ಸಿನವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸಿನವರಕ್ಕಿಂತ ಕಡಿಮೆ ದರ ಪಡೆದು ಉತ್ತಮ ಲಾಭವನ್ನು ಮಾಡುವರು ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. 1988–89 – ಇಲ್ಲ
1989–90 – ಇಲ್ಲ
1990–91 – ಇಲ್ಲ
1991–92 – 833
1992–93
(ಜನವರಿಗೆ 93ರ
ಆಂತ್ಯದವರೆಗೆ) – 1377

ಆ. ಹೌದು

ಇ. ಹೌದು

ಈ. ಇಲ್ಲ.

ಕೊಪ್ಪಳ ತಾಲ್ಲೂಕಿನ ಅಳವಂಡಿ ಹಾಗೂ ಕಿನ್ನಾಳ ಗ್ರಾಮಗಳಿಗೆ ಬಸ್ ನಿಲ್ದಾಣ.

186 (1854): ಶ್ರೀ ಎಂ. ಬಿ. ದಿವಟರ್, (ಕೊಪ್ಪಳ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೊಪ್ಪಳ ತಾಲ್ಲೂಕಿನ ಅಳವಂಡಿ ಹಾಗೂ ಕಿನ್ನಾಳ ಗ್ರಾಮಗಳಿಗೆ ಬಸ್ ನಿಲ್ದಾಣ ಮಂಜೂರಾಗಿದೆಯೆ ?

ಆ. ಮಂಜೂರಾಗಿದ್ದಲ್ಲಿ, ಅದರ ನಿರ್ಮಾಣವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಅಳವಂಡಿ ಬಸ್ ನಿಲ್ದಾಣ ಮಂಜೂರಾಗಿರುತ್ತದೆ. ಕಿನ್ನಾಳ ಬಸ್ ನಿಲ್ದಾಣವು ಮಂಜೂರಾಗಿರುವುದಿಲ್ಲ.

ಆ. ಅಳವಂಡಿ ಬಸ್ ನಿಲ್ದಾಣದ ಕೆಲಸವನ್ನು 1993–94ನೇ ಸಾಲಿನಲ್ಲಿ ಕೈಗೊಳ್ಳಲಾಗುವುದು. ಕಿನ್ನಾಳದಲ್ಲಿ ನಿವೇಶನವನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗಿದೆ.

ಕೋಮು ಸೌಹಾರ್ದತೆಯನ್ನು ಉತ್ತೇಜಿಸಲು ಮಾನವ ಸರಪಳಿಯ ಮೇಲೆ ಮಾಡಿದ ವೆಚ್ಚ.

193 (734): ಶ್ರೀ ಬಸವರಾಜ ಪಾಟೀಲ ಅಟ್ಟೂರು (ಬಸವ ಕಲ್ಯಾಣ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೋಮು ಸೌಹಾರ್ದತೆಗಾಗಿ 1993ರ ಜನವರಿ–ಫೆಬ್ರವರಿ ತಿಂಗಳಿನಲ್ಲಿ ಮಾನವ ಸರಪಳಿಯನ್ನು ರಾಜ್ಯದಾದ್ಯಂತ ರಚಿಸಲಾಗಿತ್ತೇ ?

ಆ. ಹಾಗಿದ್ದಲ್ಲಿ, ಇದಕ್ಕಾಗಿ ಖರ್ಚು ಮಾಡಿದ ಒತ್ತ ಎಷ್ಟು ? (ವಿವಿಧ ಸಂಘ – ಸಂಸ್ಥೆಗಳಿಗಾಗಿ ಮಂಜೂರು ಮಾಡಿದ ಹಣದ ಬಗ್ಗೆ ಜಿಲ್ಲಾವಾರು ಮಾಹಿತಿ ಒದಗಿಸುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ. ಇಲ್ಲ. ದಿನಾಂಕ: 30.1.93ರಂದು ಈ ಕೆಳಕಂಡ ಸ್ಥಳಗಳಲ್ಲಿ ಮಾತ್ರ ಮಾನವ ಸರಪಳಿಯನ್ನು ಏರ್ಪಡಿಸಲಾಗಿತ್ತು.

1. ಹುಬ್ಬಳಿಯಿಂದ ಧಾರವಾಡ
2. ಧಾರವಾಡದಿಂದ ಬೆಳಗಾಂ
3. ಗುಲ್ಬರ್ಗಾದಿಂದ ಬೀದರ್
4. ಬೆಂಗಳೂರಿನಿಂದ ಮೈಸೂರು
5. ಮಂಗಳೂರಿನಿಂದ ಉಡುಪಿ

ಆ. 40 ಲಕ್ಷ ರೂ.ಗಳು (ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಲಾಗಿದೆ.)

'ಕೋಮು ಸೌಹಾರ್ದತಾ ಸಪ್ತಾಹ'ದ ಅಂಗವಾಗಿ ಜಿಲ್ಲಾವಾರು ಅನುದಾನ ಬಿಡುಗಡೆ ಮಾಡಿರುವುದನ್ನು ತೋರಿಸುವ ಪಟ್ಟಿ.

ಜಿಲ್ಲೆಗಳು	ರೂಪಾಯಿಗಳು (ಲಕ್ಷಗಳಲ್ಲಿ)
1. ಬೆಂಗಳೂರು (ಗ್ರಾಮಾಂತರ)	5.00
2. ಬೆಳಗಾಂ	5.00
3. ಧಾರವಾಡ	5.00
4. ಗುಲ್ಬರ್ಗಾ	5.00
5. ಬೀದರ್	5.00
6. ಮಂಡ್ಯ	5.00
7. ಮೈಸೂರು	5.00
8. ದಕ್ಷಿಣ ಕನ್ನಡ	5.00
ಒಟ್ಟು	40.00

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ದಿನಾಂಕ 2.3.1993ರ 10ನೇ ಪಟ್ಟಿಯಲ್ಲಿರುವ 86 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 577, 523, 769, 488, 351, 99, 576, 737, 738, 1334 ಎ, 959, 1330, 1356, 1946, 1329, 1310, 1292, 1215 ಮತ್ತು 1282 ಈ ಪ್ರಶ್ನೆಗಳನ್ನು ಹೊರತು ಪಡಿಸಿ ಇನ್ನು ಉಳಿದ 37 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದ ಸ್ವಾತಂತ್ರ್ಯ ಯೋಧರಿಗೆ ಸರ್ಕಾರದ ಸೌಲಭ್ಯಗಳು.

504 (1157): ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ)